ಗಳನ್ನು ಎಲ್ಲಾ ಮಾರ್ಕೆಟಿಂಗ್ ಸೊಸೈಟಿಗಳಿಂದ ಪ್ಲಾಂಟ್ ಪ್ರೊಟೆಕ್ಷನ್ ಆಸಿಸ್ಟೆಂಟರು ಒದಗಿಸುತ್ತಾರೆ. ಅವರ ಮೂಲಕ ಪ್ರಯೋಜನ ಹೊಂದಬಹುದು.

Major and Minor Tanks in Sorab and Sagar Taluks.

*Q. 340. Sri V. S. LAKSHMIKANTAPPA (Sagar).—

Will the Government be pleased to state :—

(*a*) the number of major tanks and minor tanks in Sorab and Sagar Taluks, separately ;

(*b*) the names of such major tanks with extent of achkat under them that have been sanctioned for reconstruction of sluices and restoration work in the said taluks (figures for the two taluks may be furnished separately) ?

A.—Sri ALUR HANUMANTHAPPA (Deputy Minister for Minor Irrigation).—

		Major	*Minor*
(*a*) (i) Sorab	...	176	1,152
(ii) Sagar Taluk	...	62	1,169

(*b*) *Vide* statement given below :

List showing the names of Major Tanks with extent of Atchkat that have been sanctioned for reconstruction of sluice and restoration work.

SORAB TALUK

Sl. No.	Name of Taluk	Extent of Atchkat	Remarks
1	2	3	4
1	Restoration of Urumundina Thumbekere Ulavi Hobli Reg. No. 513.	121·26	
2	Restoration of Doddakere or Urumundinakere and Chickkere Hiresave Reg. No. 915.	121·01	
3	Restoration of Kolakanakere or Kuntakkatte Hiresave Reg. No. 918.	29·20	
4	Restoration of Doddakere Gangavalli Reg. 311 ...	101·38	
5	Restoration of Hithalakere Hiremagadi Reg. No. 389	103·25	
6	Restoration of Doddakere Ginivala Reg. No. 317 ...	92·16	
7	Restoration of Hanchi Thavarekatte Reg. No. 373 ...	114·02	
8	Restoration of Thotadakere Kamanavally (Yennekoppa) Reg. No. 308.	196·03	
9	Restoration of Basthikattekere Hirechowthi Reg. No. 398.	173·36	

(SRI ALUR HANUMANTHAPPA)

1	2	3
10	Restoration of Kalkatte Hurali Reg. 415 ...	123·37
11	Restoration of Doddakere Mallapura Reg. No. 209 ...	168·37
12	Restoration of Savaga to Yennekoppa Reg. No. 367...	219 36
13	Restoration of Makattekere Chick Idagodu Reg. No. 332.	107·01
14	Restoration of Doddakere Hunsavalli Reg. No. 823 ..	205·07
15	Restoration of Rabbalagere and Channanaikatte Thallur Reg. No. 148.	420·30
16	Restoration of Alahallikere Thundinur Reg. No. 154...	126·00
17	Restoration of Thavarekatte Negavadi Reg. No. 724	132·17
18	Restoration of Thotadakere Thettur Reg. No. 342 ...	177·00
19	Restoration of Bidaragere Uramundinakere Reg. No. 248.	107·25
20	Restoration of Kalagunasi Kallukattekere Reg. No. 21	105·34
21	Restoration of Kundagalvi Sannakere Reg. No. 884	162·01
22	Restoration of Improvements to Thotadakere Sigga Reg. No. 909.	137·11
23	Restoration of Hosakere Yelavala Reg. No. 78 ...	110·24
24	Restoration of Yelavalli Thavarekere Reg. No. 77 ...	70·39
25	Restoration of Bendekere Mavalli Reg. No. 73 ...	225·04
26	Restoration of Doddakere Uppahalli Reg. No. 1008...	76·19
27	Restoration of Thotadakere Hunavalli Reg. No. 528...	69·03
28	Restoration of Gudavai Thotadakere Reg. No. 956 ...	146·02
29	Restoration of Urumundinakere or Thotadakere, Kesaraguppa Reg. No. 271.	74·25
30	Restoration of Thavarekere Thoravagondanahalli Reg. No. 436.	110·28
31	Restoration of Doddakere Hurali Reg. No. 500 ...	337·02
32	Restoration of Arasikere Shuntikoppa Reg. No. 853...	223·15
33	Restoration of Reconstruction of sluice to Avevattikere or Anekere Indihalli Reg. No. 859.	98·04
34	Restoration of Thotadakere Induvally Reg. No. 863	78·22
35	Restoration of Badanakatte Doddakere Somanavally Reg. No. 234 and 236.	214·07
36	Restoration of Urumundina Doddakere Negavadi Reg. No. 719.	164·35
37	Restoration of Thumbrikere or Doddakere Reg. No. 268 Kanahally.	135·35
	SAGAR TALUK	
1	Restoration of Thajjondu Thotadathalekere Reg. No. 468.	100·00
2	Restoration of Thotadamelinakere Padavagodu Reg. No. 464.	73·00

3	Restoration of Suruguppe Urubagilakere Shuntikoppa Reg. No. 860.	103·00
4	Restoration of Malavarige Thotadamelinakere Reg. No. 482.	109·00
5	Restoration of Masur Thotadamelinakere or Urubagilakere Reg. No. 477.	63·00
6	Restoration of Gaddemelinakere Malavi Reg. No. 502	84·00
7	Restoration of Gadde Thalekere Balagodi Reg. No. 411	74·00
8	Restoration of Sangala Thotadamelinakere Reg. No 512	97·00
9	Restoration of Chippli Thotadamelinakere Lingadahalli Reg. No. 958.	53·00
10	Restoration of Ramannakere Marthur Reg. No. 583	185·00
11	Restoration of Gourikere Talaguppa Reg. No. 568 ...	190·00

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ತಮ್ಮ ಉತ್ತರದಲ್ಲಿ ಸೊರಬ ಮತ್ತು ಸಾಗರ ತಾಲ್ಲೂಕಿನಲ್ಲಿರುವ 176 ಮತ್ತು 62 ಮೇಜರ್ ಟ್ಯಾಂಕುಗಳಲ್ಲಿ, ಕೇವಲ 48 ಟ್ಯಾಂಕುಗಳ ಜೀರ್ಣೋದ್ಧಾರ ಕೆಲಸ ತೆಗೆದುಕೊಂಡಿದ್ದೀರ ಎಂದು ಉತ್ತರ ಕೊಟ್ಟಿದ್ದೀರ. ಬಾಕಿ ಕೆರೆಗಳಲ್ಲಿ ಯಾವುದೂ ಅಸಕ್ತಿ ವಹಿಸದಿರುವುದಕ್ಕೆ ಕಾರಣವೇನು ?

†ಶ್ರೀ ಆಲೂರು ಹನುಮಂತಪ್ಪ.—ಕೆರೆಗಳ ರೆಸ್ಟೊರೇಷನ್ ತೆಗೆದುಕೊಂಡಾಗ ರಿಪೇರಿ ಮಾಡುತ್ತೇವೆ. ಕೆಲವು ಸಂದರ್ಭದಲ್ಲಿ ಸ್ಲೂಯಿಸ್ ರಿಪೇರಿಯಾಗಬೇಕಾಗಿದ್ದರೆ, ಅಷ್ಟೇ ಮಾಡುತ್ತೇವೆ. ಈಗ ಆಗಿರತಕ್ಕಂಥ ಎರಡು ತಾಲ್ಲೂಕುಗಳ 48 ಕೆಲಸ ಮಂಜೂರಾಗಿದೆ. ಅದನ್ನು ಅಟೆಂಡ್ ಮಾಡುತ್ತಾ ಇದ್ದಾರೆ. ಇನ್ನೂ ತೆಗೆದುಕೊಳ್ಳಬೇಕಾದ ಕೆಲಸ ಅಲ್ಲಿ ಇರಬಹುದು.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಇಲ್ಲಿ ಕೆರೆಗಳಲ್ಲಿ ಇನ್ನೂ 1,500 ಎಕರೆ ಅಚ್ಚುಕಟ್ಟಿನ ಮೇಲೆ ಇದೆ. ಅವುಗಳ ಎಸ್ಟಿಮೇಟನ್ನು ಸರ್ಕಲ್ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಕಳುಹಿಸಿ ಕೊಟ್ಟು, ಎಲ್ಲವೂ ವಾಪಸು ಬಂದಿವೆ. ಸರ್ಕಾರ ಇದಕ್ಕೆ ಸಾಕಷ್ಟು ಹಣ ಕೊಟ್ಟಿಲ್ಲ ಎಂಬ ವಿಷಯ ಈಚೆಗೆ ಡಿವಿಜನ್ನಿನಿಂದ ಗೊತ್ತಾಗಿದೆ. ಇದಕ್ಕೆ ಸರ್ಕಾರ ಹಣ ಕೊಟ್ಟಿದೆಯೋ ಇಲ್ಲವೋ ಅನ್ನುವುದನ್ನು ಹೇಳಬೇಕು.

ಶ್ರೀ ಆಲೂರು ಹನುಮಂತಪ್ಪ.—ಇದಕ್ಕೆ ಮುಖ್ಯ ಕಾರಣ ಟ್ಯಾಂಕ್ ಮ್ಯಾನ್ಯುಯಲ್ ತಯಾರಾಗಿರಲಿಲ್ಲ. ಆರೇಳು ತಿಂಗಳಲ್ಲಿ ಟ್ಯಾಂಕ್ ಮ್ಯಾನ್ಯುಯಲ್ ತಯಾರು ಮಾಡಬೇಕೆಂದು ನಮ್ಮ ಅಧಿಕಾರ ವರ್ಗಕ್ಕೆ ಆದೇಶ ಕೊಟ್ಟಿದ್ದೆವು. ಈಗ ಟ್ಯಾಂಕ್ ಮ್ಯಾನ್ಯುಯಲ್ ತಯಾರು ಮಾಡಿದ್ದಾರೆ. ಸ್ಲೂಯಿಸ್ ಮೇಂಟೇನ್ ಮಾಡುವ ಕೆಲಸದಿಂದ ಗವರ್ನ್‌ಮೆಂಟಿಗೆ ಅಷ್ಟು ಖರ್ಚಾಗುವುದಿಲ್ಲ. ಅದು ಪ್ರಾಮುಖ್ಯವಾಗಿ ಮಾಡಬೇಕಾದ ವಿಷಯ. Assistant Engineer ಗಳಿಗೆ ಸ್ಲೂಯಿಸ್ ರಿಪೇರಿಗೆ ಪವರ್ಸ್ ಇದೆ. Executive Engineer ಗಳಿಗೂ ಪವರ್ಸ್ ಇದೆ. ಸರ್ಕಾರದವರೆಗೆ ಅದು ಬರಬೇಕಾಗಿಲ್ಲ. Sluice maintenance works, immediate ಆಗಿ ಅಟೆಂಡ್ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಒದಗಿಸಿದ್ದೇವೆ.

ಶ್ರೀ ಎಂ. ಸಿ. ಬನಪ್ಪ.—ಕೆರೆಗಳ ಜೀರ್ಣೋದ್ಧಾರ ಕೆಲಸ ಆದಮೇಲೆ, ಇದರಲ್ಲಿ ಆಗದೆ ಇರುವವುಗಳನ್ನು ಸರ್ಕಾರದವರು ವಹಿಸಿಕೊಳ್ಳುವ ವಿಚಾರ ಏನು ಮಾಡಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ನಾನು ಈ ಮಾನ್ಯ ಸಭೆಯಲ್ಲಿ ಈ ವಿಷಯದ ಬಗ್ಗೆ ನಾಲ್ಕು, ಆರು ಸಾರಿ ಹೇಳಿದ್ದೇನೆ. ಸರ್ಕಾರ ಈ ಬಗ್ಗೆ ತೀವ್ರವಾಗಿ ಯೋಚನೆ ಮಾಡುತ್ತಾ ಇದೆ. ತಾಲ್ಲೂಕು ಬೋರ್ಡಿಗೆ ಕೊಡುವ ಕೆರೆಗಳನ್ನು ಬಿಟ್ಟು, ಬಾಕಿ ಕೆರೆಗಳ ವಿಷಯದಲ್ಲಿ ಇರಿಗೇಷನ್ ಎಷ್ಟು ಮಟ್ಟಿಗೆ ಜವಾಬ್ದಾರಿ ವಹಿಸಬಹುದು ಎನ್ನುವುದನ್ನು ಯೋಚನೆ ಮಾಡುತ್ತಾ ಇದ್ದೇವೆ. ಇರಿಗೇಷನ್ ಬಿಲ್ ಡ್ರಾಫ್ಟ್ ಸಹಿತ ತಯಾರಾಗಿದೆ. ಅದು ಈ ಮಾನ್ಯ ಸಭೆಗೆ ಬಂದಾಗ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅವಕಾಶವಾಗುತ್ತದೆ. ಈ ಮಾನ್ಯ ಸಭೆಯ ಸದಸ್ಯರ ಗಮನಕ್ಕೆ ಸಹ ಆ ಡ್ರಾಫ್ಟ್ ಬಿಲ್ ಬರುತ್ತದೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಸೊರಬ ಮತ್ತು ಸಾಗರ ತಾಲ್ಲೂಕುಗಳಲ್ಲಿ 2,500 ರ ಮೇಲೆ ಕೆರೆಗಳು ಇರುತ್ತವೆ. Minor tank restoration ಮಾಡುವಾಗ ಸರ್ಕಾರ ಈಗ ಇರಿಗೇಷನ್‌ಯವರಿಂದ ಆಗತಕ್ಕಂಥ ತಡವನ್ನು ತಪ್ಪಿಸುವುದಕ್ಕೆ ಸಾಧ್ಯವೇ ?

ಶ್ರೀ ಆಲೂರು ಹನುಮಂತಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ 7,000 ಕೆರೆಗಳ ಮೇಲೆ ಇವೆ; ಇಡೀ ರಾಜ್ಯದ ಕೆರೆಗಳ one-fifth, ಈ ಜಿಲ್ಲೆಯಲ್ಲಿಯೇ ಇವೆ. ಅದು ಸರ್ಕಾರಕ್ಕೆ ಗೊತ್ತಿದೆ; ಆ ಕೆರೆಗಳನ್ನು ರೆಸ್ಟೋರ್ ಮಾಡಬೇಕು. ರಿಪೇರಿ ಮಾಡುವಾಗ ಸ್ಲೂಸ್ ರಿಪೇರಿ ಹಾಗೂ ಟ್ಯಾಂಕ್ ಬಂಡ್ ಲೀಕೇಜ್ ರಿಪೇರಿಯನ್ನು ತಡಮಾಡಕೂಡದೆಂದು ಆದೇಶ ಕೊಟ್ಟಿದ್ದೇವೆ. ಸಣ್ಣ ಕೆಲಸಗಳನ್ನು ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಬಿ. ಚನ್ನಬ್ಯೆರೇಗೌಡ.—ಸ್ಲೂಯಿಸ್ ಮತ್ತು ವೇಸ್ಟ್‌ವೇರ್ ರಿಪೇರಿ ಮಾಡುವ ಬಗ್ಗೆ ಅಸಿಸ್ಟೆಂಟ್ ಇಂಜನಿಯರಿಗೆ ಅಧಿಕಾರ ಇದೆ. ಮೂರು ಸಾವಿರ ರೂಪಾಯಿವರೆಗೂ ಮಾಡಿಸಲು ಅಧಿಕಾರವಿದೆ. ಆ ಪವರನ್ನು Executive Engineer, withdraw ಮಾಡಿರತಕ್ಕಂಥಾದ್ದು ನಿಜವೇ?

ಶ್ರೀ ಆಲೂರು ಹನುಮಂತಪ್ಪ.—Withdraw ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ಆ ಅಧಿಕಾರ ಹಿಂದೆಯೇ ಕೊಟ್ಟಿದೆ. ಒಂದುವೇಳೆ ಎಕ್ಸಿಕ್ಯೂಟಿವ್ ಇಂಜಿನಿಯರು ಯಾವ ಯಾವುದಕ್ಕೆ ಪ್ರಾಮುಖ್ಯತೆ ಕೊಟ್ಟು ಮಾಡಬೇಕೆಂಬ ಉದ್ದೇಶದಿಂದ, ಅಸಿಸ್ಟೆಂಟ್ ಇಂಜನಿಯರಿಗೆ ಮಾಡಿಸುವುದಕ್ಕೆ ಮುಂಚೆ ತಮಗೆ ತಿಳಿಸಬೇಕೆಂದು ಸರ್ಕ್ಯುಲರ್ issue ಮಾಡಿರಬಹುದು.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಆ ಭಾಗದಲ್ಲಿ ಕೆರೆಗಳನ್ನು ಬಿಟ್ಟರೆ ಬೇರೆ ನೀರಾವರಿ ಸಹಾಯ ಇಲ್ಲವೆಂದು ಗಮನಿಸಿ, ಒಂದು ತಿಂಗಳಲ್ಲಿ, ಮಾಡಿಸುತ್ತೀರಾ? ಏಪ್ರಿಲ್ ತಿಂಗಳಲ್ಲಿ ಮಾತ್ರ ಕೆಲಸಕ್ಕೆ ಅವಕಾಶವಿರುತ್ತದೆ. ಮಳೆಗಾಲ ಬರುವ ಮುಂಚೆ ಕಾರ್ಯಗತವಾಗುವುದಕ್ಕೆ ಸರ್ಕಾರ ಎಲ್ಲ ಇಲಾಖೆಯವರಿಗೂ ಸಾಕಷ್ಟು ತಿಳುವಳಿಕೆಕೊಟ್ಟು ಕೆಲಸ ಮಾಡಿಸುವುದಕ್ಕೆ ಸಾಧ್ಯವೇ?

ಶ್ರೀ ಆಲೂರು ಹನುಮಂತಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್ಚಾಗಿ ಮಳೆಯಾದರೂ ದೊಡ್ಡ ಜಲಾಶಯಗಳಿಲ್ಲದೆ, ಸಣ್ಣ ಕೆರೆಗಳ ಆಶ್ರಯದಲ್ಲಿ ನೀರಾವರಿ ನಡೆಯಬೇಕು. ಅದಕ್ಕಾಗಿ ಏನು ಏಳು ಸಾವಿರ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ, ಅವುಗಳು ಬಹಳ ಹಿಂದಿನ ಕಾಲದಿಂದ ರೆಸ್ಟೋರ್ ಆಗದೇನೆ, ಅವುಗಳ ಸ್ಲೂಯಿಸ್ ರಿಪೇರಿ ಮಾಡದೇನೇ, ತೊಂದರೆಯಾಗಿರತಕ್ಕದು ಸರ್ಕಾರದ ಗಮನಕ್ಕೆ ಬಂದಿದೆ. ಎಷ್ಟು ಬೇಗ, ಎಷ್ಟು ತೀವ್ರತೆಯಿಂದ ಕೆಲಸ ಮಾಡಿಸಬಹುದೋ, ಅಷ್ಟೂ ಬೇಗ ಕೆಲಸ ಮಾಡಿಸಿಕೊಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಧಿಕಾರಿಗಳಿಗೆ ಸಣ್ಣ ಕೆಲಸ ಬೇಗ ಮಾಡಿಸುವುದಕ್ಕೆ ಆದೇಶ ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಸಣ್ಣ ಪುಟ್ಟ ಕೆಲಸ ಮಾಡುವುದಕ್ಕೆ ಸೀಮೆಂಟು, ಹಣ ಒದಗಿಸಿದ್ದಾರೆಯೇ?

ಶ್ರೀ ಆಲೂರು ಹನುಮಂತಪ್ಪ.—ಹಣವನ್ನೂ ಸಹ ಒದಗಿಸಿದ್ದೇವೆ. ಸಿಮೆಂಟ್ ಅಭಾವ ನೀರಾವರಿ ಕೆಲಸಕ್ಕಲ್ಲ; ಅದರ ಬಗ್ಗೆ ಸಿಮೆಂಟ್ ಅಲಾಟ್‌ಮೆಂಟ್ ಕಷ್ಟ ಕಾಣುವುದಿಲ್ಲ.

ಶ್ರೀ ಎಚ್. ರಾಮಯ್ಯ.—ನಂಜನಗೂಡು ಸಬ್‌ಡಿವಿಜನ್ನಿನಲ್ಲಿ ಕೆಲವು ಪಿಕ್‌ಅಪ್ಪುಗಳು ಮತ್ತು ಕೆರೆಗಳಿಗೆ ಸಿಮೆಂಟ್ ಸಿಗದೆ, ಕೆಲಸ ನಿಂತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇವೆ. ಸಿಮೆಂಟ್ ಅಲಾಟ್‌ಮೆಂಟ್, ಮ್ಯೆನರ್ ಇರಿಗೇಷನ್ನಿಗೆ ಎಷ್ಟು ಬೇಕಾಗುತ್ತದೆಂದು, ಅವರ requirementನ್ನು ಸರ್ಕಾರಕ್ಕೆ ಈಗ ತಿಳಿಸಿದ್ದಾರೆ. ನಾವೂ ಸಹ ನಂಬಂಧಪಟ್ಟವರಲ್ಲಿ ಅದನ್ನು ತಿಳಿಸಿ, ನೀರಾವರಿಗಾಗಿ ಕೊಡತಕ್ಕಂಥ ಸಿಮೆಂಟ್ ಕೋಟಾ ಕೊಡಬೇಕು, ಇಲ್ಲದಿದ್ದರೆ ಕೆಲಸ ನಿಂತು ಹೋಗಬಹುದು ಎಂದು ತಿಳಿಸುತ್ತೇನೆ. ಜೊತೆಗೆ ಪ್ರತಿ ಡಿವಿಜನ್ನಿಗೆ ಸಿಮೆಂಟ್ ಅಲಾಟ್‌ಮೆಂಟ್ ಮಾಡತಕ್ಕಂಥಾದ್ದನ್ನು ಸರ್ಕಾರಕ್ಕೆ ವರದಿ ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನಿಮ್ಮ requirement ಎಷ್ಟು, ನೀವು ಎಷ್ಟು ಸಿಮೆಂಟ್ ಕೇಳಿದ್ದೀರಿ! ತಾವು ಎಷ್ಟು ಸಪ್ಲೈ ಮಾಡಿದ್ದೀರ?

ಶ್ರೀ ಆಲೂರು ಹನುಮಂತಪ್ಪ.—ನೀರಾವರಿಗೆ Quarterly 14 ಸಾವಿರ ಟನ್ ಬೇಕಾಗುತ್ತದೆ; ಅಂದರೆ ನಾಲ್ಕು ಕ್ವಾರ್ಟರಿಗೆ (ಒಂದು ವರ್ಷಕ್ಕೆ) 56 ಸಾವಿರ ಟನ್ ಸಿಮೆಂಟ್ ಬೇಕಾಗುತ್ತದೆ. ಸಣ್ಣ ನೀರಾವರಿಗೆ ಇಷ್ಟು ಬೇಕು ಎಂದು ವರದಿಬಂದಿದೆ. ಆ ಬಗ್ಗೆ ತೀವ್ರತೆಯಿಂದ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

Mr. SPEAKER.—Question Hour is over.